ಫಾರೆಸ್ಟ್.

ಇಸ್ತಿಹಾರ್ನಾಮಾ.

ತಾರೀಖು 24ನೇ ಮಾರ್ಚಿ 1903.

ನಂ. 586 – 5854, ಸಬ್ ಅಸಿಸ್ಟೆಂಟ್ ಮತ್ತು ಏಕ್‌ಸ್ಟ್ರಾ ಅಸಿಸ್ಟೆಂಟ್ ಕ್ಷಸರ್ವೇಟರುಗಳಲ್ಲಿ ಪೂಲಿ ಇರುವ ಖಾಲಿಗಳನ್ನು ಭರ್ತಿ ಮಾಡುವ ಬಗ್ಗೆ ಫಾರೆಸ್ಟ್ರಿ ರೇಂಜರುಗಳ ಇದರಡೀ ಕಂಡ ಬಡ್ತಿಗಳು 1903ನೇ ಮಾರ್ಚಿ 14ನೇ ತಾರೀಖಿನಾರಭ್ಯ ಹುಕುಂ ಮಾಡಲ್ಪಟ್ಟಿರುತ್ತವೆ.

1. ಮೊದಲನೇ ಗ್ರೇಡಿನ ರೇಂಜರಾದ ಎಂ. ಶ್ರೀನಿವಾಸರಾಯರು, 100 ರೂಪಾಯಿಗಳ ಕನಿಷ್ಟ ತಲಬಿನ ಮೇಲೆ ಸಬ್ ಅಸಿಸ್ಟೆಂಟ್ ಕ್ಷಸರ್ವೇಟರಾಗಿರತಕ್ಕದ್ದು.
2. ಎಚ್. ರಾಮುಯ್ಯನವರು ಡಿಟೋ ಡಿಟೋ
3. ಎರಡನೇ ಗ್ರೇಡಿನ ರೇಂಜರಾದ ವಿ. ನರಸಿಂಹ ಮೂರ್ತಿರಾಯರು, 100 ರೂಪಾಯಿಗಳ ತಲಬಿನ ಮೇಲೆ ಸಬ್ ಅಸಿಸ್ಟೆಂಟ್ ಕ್ಷಸರ್ವೇಟರಾಗಿರತಕ್ಕದ್ದು.
4. ಎರಡನೇ ಗ್ರೇಡಿನ ರೇಂಜರಾದ ಕೆ. ಮುತ್ತಪ್ಪನವರು, 100 ರೂಪಾಯಿಗಳ ತಲಬಿನ ಮೇಲೆ ಸಬ್ ಅಸಿಸ್ಟೆಂಟ್ ಕ್ಷಸರ್ವೇಟರಾಗಿರತಕ್ಕದ್ದು.

ಹುಕುಂ ಬಮೋಜೀಬ್,
ಜೆ. ಇ. ರಿಕೆಟ್ಸ್,
ಫಾರ್ ಫಾರೆಸ್ಟ್ರಿ ಇಲಾಖೆಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರಟರಿ.

ಮಿಲಿಟರಿ.

ಇಸ್ತಿಹಾರ್ನಾಮಾ.

ತಾರೀಖು 20ನೇ ಮಾರ್ಚಿ 1903.

ನಂ. 2137, ಮೈಸೂರ ಸೀಮೆಯ ಘನವನ್ನೆಯ್ದಿದ ಶ್ರೀಮಂ ಮಹಾರಾಜ ಸರ್ಕಾರದವರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಜವೇದಾರನ್ನಾಗಿ ಬಾದಾಮಿ ಶಂಕರರಾಯರ ಮೊಕರರಾತಿಯನ್ನು 1902ನೇ ಸೆಪ್ಟಂಬರ್ ಗುರ್ತು ತಾರೀಖಿನಾರಭ್ಯ ಮಂಜೂರ್ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.